ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಬೈಂದೂರು

ಓ ಎಸ್ ನಂಬ್ರ: 675/2023

ಪಿ.ಡಬ್ಲ್ಯೂ :1

ದಿನಾಂಕ: 08.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ: ವಾದಿ ಪರ ವಕೀಲರಾದ ಶ್ರೀ ಎನ್ ಎಸ್ ಆರ್ ಬಿ ರವರಿಂದ:

ಸಾಕ್ಷಿಯು ಹಾಜರುಪಡಿಸಿರುವ ದಾಖಲೆಗಳನ್ನು

| | |
|---|---|
| ನಿ.ಪಿ.20 | ನಾಗಪ್ಪ ಪೂಜಾರಿಯವರ ಮರಣ ಪ್ರಮಾಣ ಪತ್ರ ಎಂದು ಗುರುತಿಸಲಾಯಿತು. |

ಪಾಟೀ ಸವಾಲು: ಪ್ರತಿ ವಾದಿ ಪರ ವಕೀಲರಾದ ಶ್ರೀ ಎನ್ ಜೆ ಎಸ್ ಪರವಾಗಿ ಪಿ ಕೆ ರವರಿಂದ:

ವೀಲ್ ನಾಮೆ ಬರೆಯುವಾಗ ನಾನು ಹಾಜರು ಇರಲಿಲ್ಲ. ವೀಲ್ ನಾಮೆ ಮಾಡಿದ 1 ತಿಂಗಳ ನಂತರ ಅದರ ಬಗ್ಗೆ ನನಗೆ ತಿಳಿದು ಬಂದಿರುತ್ತದೆ. ವೀಲ್ ನಾಮೆಯನ್ನು ವಕೀಲರು ಮಾಡಿರುತ್ತಾರೆ. ಅದನ್ನು ತಯಾರಿಸಲು ನನ್ನ ಯಜಮಾನರೇ ಮಾಹಿತಿ ಕೊಟ್ಟಿರಬಹುದು. ನಾವೇ ಹೇಳಿ ಸದ್ರಿ ವೀಲ್ ನಾಮೆಯನ್ನು ಬರೆಯಿಸಿರುತ್ತೇವೆ ಎಂದರೆ ಸರಿಯಲ್ಲ. ವೀಲ್ ನಾಮೆಯ ಸಾಕ್ಷಿದಾರರು ಯಾರು ಎಂದು ನನಗೆ ತಿಳಿದಿದೆ. ಅವರುಗಳೆಂದರೆ ನಾಗಪ್ಪ ಮೊಗೇರ, ಮೌಲಾನಾ ದಸ್ತಗಿರಿ ಸಾಹೇಬ್ ಆಗಿರುತ್ತಾರೆ. ನಾಗಪ್ಪ ಮೊಗೇರ ನನ್ನ ಗಂಡನ ಪರಿಚಯಸ್ಥರು. ವೀಲ್ ನಾಮೆ ಮಾಡಿರುವ ಬಗ್ಗೆ ನನ್ನ ಯಜಮಾನರು ತಿಳಿಸಿರುತ್ತಾರೆ. ಅದರಲ್ಲಿ 4 ಶೆಡ್ಯೂಲುಗಳು ಒಳಗೊಂಡಿದೆ. ಅದರಂತೆ ಯಾವ ಶೆಡ್ಯೂಲು ಯಾರಿಗೆ ಮಾಡಿಕೊಡಲಾಗಿದೆ ಎಂದು ನನಗೆ ಮಾಹಿತಿ ಇರುತ್ತದೆ.

ವೀಲು ನಾಮೆ ಪ್ರಕಾರ ಯಾರ ಹೆಸರಿಗೆ ಶೆಡ್ಯೂಲ್ ಮಾಡಲಾಗಿದೆ ಎಂದು ದಾಖಲಾತಿ ನೋಡಿ ಹೇಳಬೇಕಾಗುತ್ತದೆ. ಶೆಡ್ಯೂಲ್ ನಲ್ಲಿರುವ ವಿವರಿಸಿರುವ ಆಸ್ತಿಗಳನ್ನು ಪ್ರತಿವಾದಿಗಳಿಗೆ ಕೊಡಲು ಆಕ್ಷೇಪವಿಲ್ಲ ಎಂದರೆ ಸಾಕ್ಷಿ ನನ್ನ ಜೀವತಾವಧಿಯಲ್ಲಿ ಕೊಡದೆ ನನ್ನ ಕಾಲವಾದ ನಂತರ ಪಡೆಯಲು ಒಪ್ಪಿಗೆ ಇರುತ್ತದೆ ಎಂದು ನುಡಿಯುತ್ತಾರೆ. ವೀಲು ನಾಮೆಯಲ್ಲಿ ವಿವರಿಸಿರುವ ಆಸ್ತಿಗಳನ್ನು ಈಗಲೇ ಪ್ರತಿವಾದಿಗಳಿಗೆ ಕೊಡಲು ಬದ್ದರಾಗಿರುತ್ತೇನೆ ಎಂದರೆ ಸರಿಯಲ್ಲ. ಆದರೂ ಸದ್ರಿ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ:ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ. ಇದೆ.

ಶಾರಿ

Shanthi 8.10.25

ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ಬೈಂದೂರು(C/C)